ಎಂ.ವಿ.ಸಿ - 466/2025
ಪಿ.ಡಬ್ಲ್ಯು - 01

**ದಿನಾಂಕ : 04-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ವಾಹನವನ್ನು ನನ್ನ ತಮ್ಮ ವಿರಾಜ್ ಚಲಾಯಿಸುತಿದ್ದ . ನಾವು ಕೋಡಿಬೆಂಗ್ರೆಯಿಂದ ಉಡುಪಿಗೆ ಹೋಗುತಿದ್ದರು. ನಾನು ಮತ್ತು ನನ್ನ ತಮ್ಮ ವಿರಾಜ್ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ವಿರಾಜ್ ನಿಧಾನವಾಗಿ ವಾಹನವನ್ನು ಚಲಾಯಿಸುತಿದ್ದ . ನನಗೆ ದ್ವಿ ಚಕ್ರ ವಾಹನವನ್ನು ಚಲಾಯಿಸಲು ಬರುತ್ತದೆ . ನಾವು ಹೋಗುತಿದ್ದ ವಾಹನ ನನ್ನ ತಮ್ಮ ವಿರಾಜ್ ಗೆ ಸೇರಿರುತ್ತದೆ . ನನ್ನ ತಮ್ಮ ವಿರಾಜ್ ನಿಗೆ ವಾಹನ ಚಲಾಯಿಸಲು ಚಾಲನ ಪರವಾನಿಗೆ ಇರಲಿಲ್ಲ . ನಾನು ದ್ವಿ ಚಕ್ರ ವಾಹನದಲ್ಲಿ ಎರಡು ಕಡೆ ಕಾಲುಗಳನ್ನು ಹಾಕಿಕೊಂಡು ರಸ್ತೆಗೆ ಮುಖ ಮಾಡಿ ಕುಳಿತಿದ್ದೆ . ಅಪಘಾತಪಡಿಸಿದೆ ಎನ್ನಲಾದ ವಾಹನವನ್ನು ಅಪಘಾತದ ಮೊದಲು ನಾನು ನೋಡಲಿಲ್ಲ. ದ್ವಿ ಚಕ್ರ ವಾಹನದಲ್ಲಿ ಯಾವ ಯಾವ ಬಿಡಿಭಾಗಗಳು ಇದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ದ್ವಿ ಚಕ್ರ ವಾಹನಕ್ಕೆ 2 ಮಿರರ್ ಗಳು ಇದ್ದವು . ವಾಹನವನ್ನು ನೋಡಿ ಒಮ್ಮೆಲೇ ನನ್ನ ತಮ್ಮ ವಿರಾಜ್ ಬ್ರೇಕ್ ಹಾಕಿದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮತ್ತೊಂದು ವಾಹನ ನಮ್ಮ ವಾಹನದ ಹಿಂಬದಿಗೆ ಡಿಕ್ಕಿಪಡಿಸಿತು ಎಂದುತಿಳಿಸಿರುತ್ತಾರೆ . ನಮ್ಮ ಮತ್ತು ಮತ್ತೊಂದು ವಾಹನದ ನಡುವೆ ಇತರೇ ಯಾವುದೇ ವಾಹನ ಇರಲಿಲ್ಲ . ಅಪಘಾತಪಡಿಸಿದ ವಾಹನ ನಮ್ಮ ಹಿಂಬದಿಯಿಂದ ಬಂದಿರುತ್ತದೆ . ನಮ್ಮ ವಾಹನದ ಬಲಭಾಗಕ್ಕೆ ಸದ್ರಿ ವಾಹನ ತಾಗಿರುತ್ತದೆ .

ಜಂಕ್ಷನ್ ನಿಂದ ಸ್ವಲ್ಪ ದೂರದಲ್ಲಿ ಅಪಘಾತ ಆಗಿರುತ್ತದೆ . ಹಿಂದಿನಿಂದ ಬಂದ ವಾಹನ ಮುಂದಕ್ಕೆ ಹೋಗಲು ಅನುವು ಮಾಡಿ ಕೊಡದೇ ಅಡ್ಡದಿಡ್ಡಿಯಾಗಿ ನನ್ನ ತಮ್ಮ ಚಲಾಯಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಎರಡನೇ ಎದುರುದಾರರ ವಿಮೆಗೆ ಒಳಪಟ್ಟ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ಅಪಘಾತದ ನಂತರ ನನ್ನ ತಮ್ಮನನ್ನು ಕೆಎಂಸಿ ಆಸ್ಪತ್ರೆ ಗೆ ದಾಖಲಿಸಲಾಯಿತು . ಅಲ್ಲಿ ಏನು ಚಿಕಿತ್ಸೆ ಕೊಡಲಾಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಆಸ್ಪತ್ರೆಯಲ್ಲಿ 13 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ . ನನ್ನ ತಮ್ಮ ಎರಡು ಬಾರಿ ಒಳರೋಗಿಯಾಗಿ ದಾಖಲಾಗಿದ್ದನು. ಎರಡನೇ ಬಾರಿಗೆ ನನ್ನ ತಮ್ಮ ಫಿಜಿಯೋತೆರಫಿ ಮತ್ತು ಇತರೇ ಗಾಯಗಳಿಗೆ ಸಂಬಂದಪಟ್ಟಂತೆ ಚಿಕಿತ್ಸೆ ಪಡೆಯಲು ದಾಖಲಾಗಿದ್ದ. ನನ್ನ ತಮ್ಮ ಈಗ ಬೆಂಗಳೂರಿನಲ್ಲಿ ಇರುತ್ತಾರೆ . ನನ್ನ ತಮ್ಮ ನ ಪಾಸ್ ಪೋರ್ಟ್ ನ್ನು ಬೇಕಾದರೇ ಹಾಜರುಪಡಿಸುತ್ತೇನೆ . ನನ್ನ ತಮ್ಮ ಈಗ ಯಾವುದೇ ಕೆಲಸ ಮಾಡುತ್ತಿಲ್ಲ . ಅಪಘಾತ ದ ಮೊದಲು ನನ್ನ ತಮ್ಮ ನರ್ಸ್ ಆಗಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ . ನನ್ನ ತಮ್ಮ ನರ್ಸಿಂಗ್ ಕೋರ್ಸ್ ಮಾಡಿದ ಬಗ್ಗೆ ದಾಖಲೆ ಇದೆ . ಅದನ್ನು ಬೇಕಾದರೇ ಹಾಜರುಪಡಿಸುತ್ತೇನೆ . ನನ್ನ ತಮ್ಮನಿಗೆ ಯಾವುದೇ ಕೆಲಸ ಇರಲಿಲ್ಲ ಮತ್ತು ಯಾವುದೇ ಸಂಭಳ ಬರುತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ತಮ್ಮನಿಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ನಿಗೆ

ಯಾವುದೇ ವೈದ್ಯಕೀಯ ಚಿಕಿತ್ಸೆ ಬೇಕಾಗಿಲ್ಲ ಎಂದರೆ ಸರಿಯಲ್ಲ. ನಿಪಿ 14 ರಲ್ಲಿ ಕಾಣಿಸಿದ ಅಂಗನ್ಯೂನತೆ ಅವರಿಗೆ ಇಲ್ಲ ಎಂದರೆ ಸರಿಯಲ್ಲ . ನನ್ನ ತಮ್ಮನಿಗೆ ಯಾವುದೇ ಇತರೇ ವೈದ್ಯಕೀಯ ಖರ್ಚಿನ ಅಗತ್ಯತೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ನಾನು ಹೇಳುವಷ್ಟು ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಹೆಲ್ತ್ ಇನ್ಸುರೆನ್ಸ್ ಇತ್ತು . ಮೊದಲಿನ ಒಳರೋಗಿ ಬಿಲ್ಲಿನ ಸ್ವಲ್ಪ ಭಾಗ ಹಣ ಬಂದಿರುತ್ತದೆ . ನಾವು ಮೊದಲಿನ ಒಳರೋಗಿ ಬಿಲ್ಲನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಕಾರಣ ಅದರ ಹಣ ಬಂದಿರುತ್ತದೆ . ಮೆಡಿಕಲ್ ಬಿಲ್ಲಿನಲ್ಲಿ ಕಾಣಿಸಿದ ವೆಚ್ಚ ಒಳರೋಗಿ ಬಿಲ್ಲಿನಲ್ಲಿ ಒಳಗೊಂಡಿದೆ ಎಂದರೆ ಸರಿಯಲ್ಲ.

ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಮ್ಮನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಯಾವುದೇ ದೈಹಿಕ ನ್ಯೂನ್ಯತೆ ಇಲ್ಲ ಮತ್ತು ಸಂಪೂರ್ಣ ಆರೋಗ್ಯವಾಗಿದ್ದಾನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.